**ಪತ್ರಿಕಾ ಪ್ರಕಟಣೆ**

# ಈ ಬಾರಿಯ 'ದಿ ಬಿಗ್ ಬಿಲಿಯನ್ ಡೇಸ್' ಹಬ್ಬದ ಮಾರಾಟ ಉತ್ಸವದಲ್ಲಿ ಕಿರಾಣಿ ಮತ್ತು ರಿಟೇಲ್ ವರ್ತಕರು ಶೇ 70ರಷ್ಟು ಇ-ಕಾಮರ್ಸ್ ಅಳವಡಿಸಿಕೊಂಡಿರುವುದಕ್ಕೆ ಸಾಕ್ಷಿಯಾದ ಫ್ಲಿಪ್‌ಕಾರ್ಟ್ ಹೋಲ್‌ಸೇಲ್

- **ದಿ ಬಿಗ್ ಬಿಲಿಯನ್ ಡೇಸ್ 2021 ಸಂದರ್ಭದಲ್ಲಿ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮಾರಾಟ ತಾಣದಲ್ಲಿ ಕಿರಾಣಿ ವರ್ತಕರ ಸದಸ್ಯತ್ವವು ಶೇ 30ರಷ್ಟು ಏರಿಕೆ**
- **ಹೊಸ ವಹಿವಾಟು ತಾಣಗಳು ಬೆಳಕಿಗೆ ಬಂದಿರುವುದರಿಂದ 2 ಮತ್ತು 3ನೇ ಹಂತದ ನಗರಗಳಲ್ಲಿ ಬಿ2ಬಿ ವಹಿವಾಟು ವೃದ್ಧಿ**

**ಬೆಂಗಳೂರು, ಅಕ್ಟೋಬರ್ 12, 2021:** ಭಾರತದ ಸ್ವದೇಶಿ ಸಂಸ್ಥೆ ಫ್ಲಿಪ್‌ಕಾರ್ಟ್ ಗ್ರೂಪ್‌ನ ಡಿಜಿಟಲ್ ಬಿ2ಬಿ ಮಾರುಕಟ್ಟೆ ತಾಣವಾಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಸತತ ಎರಡನೆ ವರ್ಷ ಆಯೋಜಿಸಿದ್ದ 'ದಿ ಬಿಗ್ ಬಿಲಿಯನ್ ಡೇಸ್' (The Big Billion Days) ಹಬ್ಬದ ವಿಶೇಷ ಮಾರಾಟ ಕಾರ್ಯಕ್ರಮದಲ್ಲಿ ದೇಶದಾದ್ಯಂತ ಕಿರಾಣಿ ಅಂಗಡಿ ಮಾಲೀಕರು ಮತ್ತು ರಿಟೇಲ್ ವರ್ತಕರು ಉತ್ಸಾಹದಿಂದ ಭಾಗಿಯಾಗಿದ್ದರು. 2021ರ ಅಕ್ಟೋಬರ್ 10ರಂದು ಮುಕ್ತಾಯಗೊಂಡ 'ಬಿಗ್ ಬಿಲಿಯನ್ ಡೇಸ್'ನಲ್ಲಿ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ದೇಶದಾದ್ಯಂತ ಕಿರಾಣಿ ಅಂಗಡಿಗಳು ಶೇ 70ರಷ್ಟು ಇ-ಕಾಮರ್ಸ್ ಅಳವಡಿಸಿಕೊಂಡಿರುವುದಕ್ಕೆ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಸಾಕ್ಷಿಯಾಗಿದೆ. 24 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ 10,000ಕ್ಕೂ ಅಧಿಕ ಪಿನ್‌ಕೋಡ್‌ಗಳಲ್ಲಿನ 5 ಲಕ್ಷಕ್ಕೂ ಹೆಚ್ಚು ಕಿರಾಣಿ ಅಂಗಡಿಗಳು ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಅತ್ಯುತ್ತಮ ಬೆಲೆಯ ಮಳಿಗೆಗಳ ಮೂಲಕ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ತಾಣದಲ್ಲಿ ವಹಿವಾಟು ನಡೆಸಿವೆ.

ದಿ ಬಿಗ್ ಬಿಲಿಯನ್ ಡೇಸ್ 2021 ಸಂದರ್ಭದಲ್ಲಿ ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮಾರಾಟ ತಾಣದಲ್ಲಿ ಕಿರಾಣಿ ವರ್ತಕರ ಸದಸ್ಯತ್ವವು ಶೇ 30ರಷ್ಟು ಏರಿಕೆಯಾಗಿದೆ. ಕಿರಾಣಿ ಅಂಗಡಿಗಳನ್ನು ಮತ್ತು ರಿಟೇಲ್ ವ್ಯಾಪಾರ ವ್ಯವಸ್ಥೆಯನ್ನು ಡಿಜಿಟಲೀಕರಣ ಮಾಡುವುದರತ್ತ ತನ್ನ ಗಮನವನ್ನು ಕೇಂದ್ರಿಕರಿಸುವುದನ್ನು ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮುಂದುವರಿಸಿದೆ. ಭೋಪಾಲ್, ಕೋಟ, ಲಖನೌ, ಜಿರಾಕ್‌ಪುರದಂತಹ ನಗರಗಳಿಂದ ಬಂದ ಕಿರಾಣಾ ಸದಸ್ಯರು 1.8ಪಟ್ಟು ಮಾರಾಟದಲ್ಲಿ ಏರಿಕೆ ದಾಖಲಿಸಿದರು. ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನಲ್ಲಿ ಜನರಲ್ ಮರ್ಚಂಡೈಸ್ ವಿಭಾಗವು ಖರೀದಿಗಳಲ್ಲಿ ಶೇ 124ರಷ್ಟು ಹೆಚ್ಚಳವನ್ನು ಕಂಡಿದೆ. ನಂತರದ ಸ್ಥಾನದಲ್ಲಿ ದಿನಸಿ ವ್ಯಾಪಾರದಲ್ಲಿ ಶೇ 50ರಷ್ಟು ಬೇಡಿಕೆ ಹೆಚ್ಚಳ ದಾಖಲಾಗಿದೆ. ಫ್ಯಾಷನ್ ವಿಭಾಗದ ವಹಿವಾಟು ಶೇ 24ರಷ್ಟು ಹೆಚ್ಚಾಗಿದೆ.

'ಬಿ2ಬಿ'ಗಾಗಿ ಡಿಜಿಟಲ್ ಕಾಮರ್ಸ್ ಬಗ್ಗೆ ಹೆಚ್ಚಿನ ಒಲವು ಕಂಡು ಬಂದಿದೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಶೇ 45ಕ್ಕಿಂತ ಹೆಚ್ಚಿನ ಸದಸ್ಯರು ಆನ್‌ಲೈನ್‌ನಲ್ಲಿ ವಹಿವಾಟು ನಡೆಸಿದ್ದಾರೆ. ಶೇ 35ಕ್ಕಿಂತ ಹೆಚ್ಚು ಜನರು ಇ-ಕಾಮರ್ಸ್‌ನಲ್ಲಿನ ಹೆಚ್ಚಿನ ವಿಶ್ವಾಸ ಮತ್ತು ಅನುಕೂಲತೆಯ ಕಾರಣಗಳಿಗೆ ಸ್ವಯಂ-ಸೇವೆಯನ್ನು ಆರಿಸಿಕೊಂಡಿದ್ದಾರೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ದಿನದ ವಹಿವಾಟಿನ ವಿತರಣೆಯಲ್ಲಿ ಶೇ 50ರಷ್ಟು ಏರಿಕೆಯಾಗಿದೆ.

**ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ವಹಿವಾಟಿನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಆದರ್ಶ್ ಮೆನನ್** ಅವರು ಮಾತನಾಡಿ, 'ಸತತ ಎರಡನೇ ವರ್ಷವೂ ಬಿಗ್ ಬಿಲಿಯನ್ ಡೇಸ್ ಮಾರಾಟವು ಯಶಸ್ವಿಯಾಗಿರುವುದಕ್ಕೆ ನಮ್ಮ ಪಾಲುದಾರರಿಗೆ ನಾನು ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ. ಹಬ್ಬದ ಖರೀದಿ ಭರಾಟೆ ಸೃಷ್ಟಿಸಿದ ಅಗಾಧ ಪ್ರತಿಕ್ರಿಯೆ ಕಂಡು ನಮಗೆ ತುಂಬ ಸಂತೋಷವಾಗಿದೆ. ರಿಟೇಲ್ ವಹಿವಾಟು ವ್ಯವಸ್ಥೆಗೆ ಇದು ಭಾರಿ ಉತ್ತೇಜನ ನೀಡಲಿರುವುದು ನಮಗೆ ಖಚಿತವಾಗಿದೆ. ಸಣ್ಣ ಉದ್ಯಮಗಳು ಬೆಳೆಯುವುದಕ್ಕೆ ಸಹಾಯ ಮಾಡುವಲ್ಲಿ ನಮ್ಮ 'ತಂತ್ರಜ್ಞಾನವೇ ಮೊದಲು' ಧೋರಣೆಯು ಇ-ಕಾಮರ್ಸ್ ಸೌಲಭ್ಯವನ್ನು ಗರಿಷ್ಠ ಪ್ರಮಾಣದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಕಾರಣವಾಗಿದೆ. ಇದು ಡಿಜಿಟಲೀಕರಣದ ವೇಗವನ್ನೂ ಹೆಚ್ಚಿಸಿದೆ. ಡಿಜಿಟಲೀಕರಣ ಆಧಾರಿತ ಸೂಕ್ತ ಹೊಂದಾಣಿಕೆಯ ಮತ್ತು ಸ್ವಾವಲಂಬನೆಯ 'ಬಿ2ಬಿ' ವಹಿವಾಟಿನ ಲಾಭಗಳು

ದೀರ್ಘಾವಧಿಯಲ್ಲಿ ಎಲ್ಲರ ಅನುಭವಕ್ಕೆ ಬರಲಿವೆ. ಇದರೊಂದಿಗೆ, ಕಿರಾಣಿ ವರ್ತಕರು ಮತ್ತು ರಿಟೇಲ್ ವ್ಯಾಪಾರಿಗಳಿಗೆ ಡಿಜಿಟಲೀಕರಣದ ಮೂಲಕ ಅವರ ವಹಿವಾಟು ಹೆಚ್ಚಳಗೊಳ್ಳುವುದನ್ನು ನಾವು ಎದುರು ನೋಡುತ್ತಿದ್ದೇವೆ' ಎಂದು ಹೇಳಿದ್ದಾರೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಸಾಲ ನೀಡಿಕೆಯು ಭಾರಿ ಏರಿಕೆ ಕಂಡಿದೆ. 1.5 ಲಕ್ಷ ಕಿರಾಣಿ ವರ್ತಕರಿಗೆ 14 ದಿನಗಳವರೆಗೆ ಬಡ್ಡಿರಹಿತ ಸಾಲ ಸೌಲಭ್ಯವನ್ನು ಡಿಜಿಟಲ್ ರೂಪದಲ್ಲಿ (ಎಂಡ್–ಟು–ಎಂಡ್) ನೀಡಲಾಯಿತು. 'ಈಗ ಖರೀದಿಸಿ ನಂತರ ಪಾವತಿಸಿ' ಸೌಲಭ್ಯದಡಿ ರೂ 10 ಸಾವಿರಗಳಿಂದ ರೂ 25 ಲಕ್ಷದವರೆಗಿನ ಸಾಲ ಸೌಲಭ್ಯವನ್ನು ಬ್ಯಾಂಕ್‌ಗಳು ಮತ್ತು ಹಣಕಾಸು ತಂತ್ರಜ್ಞಾನ ಸಂಸ್ಥೆಗಳ ನೆರವಿನಿಂದ ಕಾರ್ಯಗತಗೊಳಿಸಲಾಗಿದೆ. ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳ ಪಾಲುದಾರರ ಸಹಯೋಗದಲ್ಲಿ 'ಬಿಗ್ ಬಿಲಿಯನ್ ಡೇಸ್'ನಲ್ಲಿ ವಿವಿಧ ಸದಸ್ಯರಿಗೆ ರೂ 165 ಕೋಟಿ ಮೊತ್ತದ ಸಾಲವನ್ನು ಒದಗಿಸಲು ಸಾಧ್ಯವಾಗಿದೆ.

ಈ 'ಬಿಗ್ ಬಿಲಿಯನ್ ಡೇಸ್' ವಿಶೇಷ ಮಾರಾಟ ಸಂದರ್ಭದಲ್ಲಿ ಕಚೇರಿಗಳು ಮತ್ತು ವಿವಿಧ ಸಂಸ್ಥೆಗಳು 5,400 ಕ್ಕಿಂತಲೂ ಹೆಚ್ಚು ಗ್ರಾಹಕರಿಂದ ಖರೀದಿ ವಹಿವಾಟು ನಡೆಸಿ ತಮ್ಮ ಸಗಟು ಖರೀದಿಗೆ ಜಿಎಸ್‌ಟಿ ಪ್ರಯೋಜನಗಳನ್ನು ಪಡೆದುಕೊಳ್ಳಲು ಇ–ಕಾಮರ್ಸ್ ಸೌಲಭ್ಯ ಬಳಸಿಕೊಳ್ಳಲು ಮುಂದಾಗಿವೆ.

2020ರಲ್ಲಿ ಆರಂಭವಾದ ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ದೇಶದ ಸಣ್ಣ ಪಟ್ಟಣಗಳು ಸೇರಿದಂತೆ ಕಿರಾಣಿ ಅಂಗಡಿಗಳು ಮತ್ತು 'ಎಂಎಸ್‌ಎಂಇ'ಗಳಿಗೆ ಸೇವೆ ಒದಗಿಸಲು ತನ್ನ ವಹಿವಾಟಿನ ವ್ಯಾಪ್ತಿಯನ್ನು ತ್ವರಿತವಾಗಿ ವಿಸ್ತರಿಸಿದೆ. ಈ ಮಾರಾಟ ತಾಣವು ಫ್ಯಾಷನ್, ದಿನಸಿ ಅಥವಾ ದಿನಬಳಕೆಯ ಸರಕು ಒಳಗೊಂಡಂತೆ ಗ್ರಾಹಕರಿಗೆ ಅಗತ್ಯವಿರುವ ಸರಕುಗಳ ವಿಭಾಗಗಳಲ್ಲಿ ವ್ಯಾಪಕವಾದ ಆಯ್ಕೆ ಸೌಲಭ್ಯವನ್ನು ನೀಡುತ್ತದೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಫ್ಲಿಪ್‌ಕಾರ್ಟ್ ಗ್ರೂಪ್‌ನ ಅನುಭವ ಮತ್ತು ಉದ್ಯಮದ ತಿಳುವಳಿಕೆ ಮೂಲಕ ಡಿಜಿಟಲ್ ಕ್ಷೇತ್ರದಲ್ಲಿ ಕಿರಾಣಿ ಅಂಗಡಿ ಮತ್ತು ರಿಟೇಲ್ ವ್ಯಾಪಾರಿಗಳಿಗೆ ಉತ್ತಮವಾಗಿ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಒದಗಿಸುತ್ತದೆ. ಕಿರಾಣಿ ಅಂಗಡಿ ಮತ್ತು ರಿಟೇಲ್ ವ್ಯಾಪಾರಿಗಳು ಇ–ಕಾಮರ್ಸ್ ಅನ್ನು ತಮ್ಮ ಆದ್ಯತೆಯ ಖರೀದಿಯ ವಿಧಾನವಾಗಿ ಅಳವಡಿಸಿಕೊಳ್ಳುತ್ತಿದ್ದಾರೆ. ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ದೇಶದಾದ್ಯಂತ 15 ಲಕ್ಷಕ್ಕೂ ಹೆಚ್ಚು ಸದಸ್ಯರಿಗೆ ಸೇವೆ ಸಲ್ಲಿಸುತ್ತದೆ, ಇದರಲ್ಲಿ ಕಿರಾಣಿ ಅಂಗಡಿಗಳು, ಹೋರೆಕಾ (ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಕೆಫಿಟೇರಿಯಾಗಳು) ಮತ್ತು ಒ & ಐ (ಕಚೇರಿಗಳು ಮತ್ತು ಸಂಸ್ಥೆಗಳು) ಸೇರಿವೆ.

**<u>ಫ್ಲಿಪ್‌ಕಾರ್ಟ್ ಗ್ರೂಪ್ ಬಗ್ಗೆ</u>**

ಫ್ಲಿಪ್‌ಕಾರ್ಟ್ ಗ್ರೂಪ್, ಭಾರತದ ಪ್ರಮುಖ ಡಿಜಿಟಲ್ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ. ಫ್ಲಿಪ್‌ಕಾರ್ಟ್, ಮಿಂತ್ರಾ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮತ್ತು ಕ್ಲಿಯರ್‌ಟ್ರಿಪ್ ಕಂಪನಿಗಳನ್ನು ಈ ಸಮೂಹವು ಒಳಗೊಂಡಿದೆ. ಈ ಸಮೂಹವು ಭಾರತದ ಪ್ರಮುಖ ಪಾವತಿ ಆ್ಯಪ್‌ಗಳಲ್ಲಿ ಒಂದಾಗಿರುವ ಫೋನ್‌ಪೇದ ಬಹುಪಾಲು ಷೇರುಗಳನ್ನು ಹೊಂದಿದೆ.

2007ರಲ್ಲಿ ಆರಂಭವಾಗಿರುವ ಫ್ಲಿಪ್‌ಕಾರ್ಟ್, ಲಕ್ಷಾಂತರ ಗ್ರಾಹಕರು, ಮಾರಾಟಗಾರರು, ವ್ಯಾಪಾರಿಗಳು ಮತ್ತು ಸಣ್ಣ ಉದ್ಯಮಗಳು ಭಾರತದ ಡಿಜಿಟಲ್ ವಾಣಿಜ್ಯ ಕ್ರಾಂತಿಯ ಭಾಗವಾಗಲು ಅನುವು ಮಾಡಿಕೊಟ್ಟಿದೆ. ನೋಂದಾಯಿತ ಗ್ರಾಹಕರ ಸಂಖ್ಯೆ 35 ಕೋಟಿಗಿಂತಲೂ ಹೆಚ್ಚಾಗಿದೆ. 80ಕ್ಕೂ ವಿಭಾಗಗಳಲ್ಲಿ 15 ಕೋಟಿ ಉತ್ಪನ್ನಗಳನ್ನು ನೀಡುತ್ತಿದೆ. ಭಾರತದಲ್ಲಿ ವಾಣಿಜ್ಯ ವಹಿವಾಟು ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ಮಾಡಲು, ಎಲ್ಲರಿಗೂ ಅದು ಕೈಗೆಟುಕುವಂತೆ ಮಾಡಲು, ಗ್ರಾಹಕರನ್ನು ಸಂತೋಷಪಡಿಸಲು, ವಹಿವಾಟಿನ ವಲಯದಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಉದ್ಯಮಿಗಳು ಮತ್ತು ಎಂಎಸ್‌ಎಂಇಗಳ ತಲೆಮಾರುಗಳನ್ನು ಸಬಲೀಕರಣಗೊಳಿಸುವ ನಮ್ಮ ಪ್ರಯತ್ನಗಳು ಫಲ ನೀಡಿವೆ. ಉದ್ಯಮಗಳಲ್ಲಿ ಅನೇಕ ಹೊಸತನಗಳನ್ನು ಮೊದಲ ಬಾರಿಗೆ ಪರಿಚಯಿಸುವುದಕ್ಕೂ ಇವೆಲ್ಲವು ನಮಗೆ ಪ್ರೇರಣೆ ನೀಡಿವೆ. ಸರಕು ಪೂರೈಸಿದ ನಂತರವೇ ನಗದು ಪಾವತಿ (ಕ್ಯಾಷ್ ಆನ್ ಡೆಲಿವರಿ), ಬಡ್ಡಿರಹಿತ ಸಮಾನ ಮಾಸಿಕ ಕಂತು ಪಾವತಿ ಸೌಲಭ್ಯ (ನೋ ಕಾಸ್ಟ್ ಇಎಂಐ) ಮತ್ತು ಸುಲಭ ರಿಟರ್ನ್ಸ್ ಸೌಲಭ್ಯಗಳನ್ನು ಮೊದಲ ಬಾರಿಗೆ ಪರಿಚಯಿಸಿರುವುದಕ್ಕೆ ಫ್ಲಿಪ್‌ಕಾರ್ಟ್ ಹೆಸರುವಾಸಿಯಾಗಿದೆ. ಗ್ರಾಹಕ ಕೇಂದ್ರಿತ ಆವಿಷ್ಕಾರಗಳು ಲಕ್ಷಾಂತರ ಭಾರತೀಯರಿಗೆ ಆನ್‌ಲೈನ್ ಶಾಪಿಂಗ್ ಅನ್ನು ಹೆಚ್ಚು ಸುಲಭವಾಗಿ ಮತ್ತು ಕೈಗೆಟುಕುವಂತೆ ಮಾಡಿದೆ. ತನ್ನ ಗ್ರೂಪ್ ಕಂಪನಿಗಳ ಜೊತೆಯಲ್ಲಿ, ಫ್ಲಿಪ್ ಕಾರ್ಟ್ ತಂತ್ರಜ್ಞಾನದ ಮೂಲಕ ಭಾರತದಲ್ಲಿ ವಾಣಿಜ್ಯ ವಹಿವಾಟನ್ನು ಪರಿವರ್ತಿಸಲು ಬದ್ಧವಾಗಿದೆ.

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು media@flipkart.com ಗೆ ಬರೆಯಿರಿ